ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 01-03-2016

# ಪತ್ರಿಕಾ ಪ್ರಕಟಣೆ

## ವಿಧಾನ ಮಂಡಲದಲ್ಲಿ ಇಂದು

# ವಿಧಾನಸಭೆಯಲ್ಲಿ ಸಂತಾಪಸೂಚಕ ನಿರ್ಣಯ ಅಂಗೀಕಾರ

ಬೆಂಗಳೂರು, ಮಾರ್ಚ್ 1 (ಕರ್ನಾಟಕ ವಾರ್ತೆ)

ಕರ್ನಾಟಕ ವಿಧಾನಸಭೆ ಇಂದು ಸಮಾವೇಶಗೊಳ್ಳುತ್ತಿದ್ದಂತೆಯೇ ರಾಜ್ಯ ವಿಧಾನಸಭಾಧ್ಯಕ್ಷ ಶ್ರೀ ಕಾಗೋಡು ತಿಮ್ಮಪ್ಪನವರು ಇತ್ತೀಚೆಗೆ ನಿಧನರಾದ ಗಣ್ಯರಿಗೆ ಸಂತಾಪ ಸೂಚಿಸುವ ಗೊತ್ತುವಳಿ ಮಂಡಿಸಿದರು.

ಇತ್ತೀಚೆಗೆ ನಿಧನರಾದ ರಾಜ್ಯದ ಮಾಜಿ ಸಚಿವರಾದ ಹೆಚ್.ಜಿ. ಗೋವಿಂದೇಗೌಡ, ಎಂ.ಎಂ. ನಾಣಯ್ಯ, ವಿಧಾನಸಭೆಯ ಮಾಜಿ ಸದಸ್ಯರುಗಳಾದ ಟಿ.ಜಿ. ತಿಮ್ಮೇಗೌಡ, ಶರಣಬಸಪ್ಪ ಮಾಲಿ ಪಾಟೀಲ್ ದಂಗಾಪುರ, ಕನ್ನಡದ ಹಿರಿಯ ಸಾಹಿತಿ ಡಾ. ಸಾ.ಶಿ ಮರುಳಯ್ಯ, ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ಗೀತಪ್ರಿಯ, ಪಂಜಾಬ್‌ನಲ್ಲಿ ವಾಯುಪಡೆಯ ಮೇಲೆ ನಡೆದ ಉಗ್ರರ ಧಾಳಿಯಲ್ಲಿ ಹುತಾತ್ಮರಾದ ಬೆಂಗಳೂರಿನವರಾದ ಲೆಫ್ಟಿನೆಂಟ್ ಕರ್ನಲ್ ನಿರಂಜನ್ ಒಳಗೊಂಡಂತೆ ಒಟ್ಟು ಮೂವರು ವೀರ ಯೋಧರು ಹಾಗೂ ಸಿಯಾಚಿನ್ ನೀರುಗಲ್ಲು ಪ್ರದೇಶದಲ್ಲಿ ಹಿಮಪಾತಕ್ಕೆ ಒಳಗಾಗಿ ಹುತಾತ್ಮರಾದ ಧಾರವಾಡದ ಲ್ಯಾನ್ಸ್ ನಾಯಕ್ ಹನುಮಂತಪ್ಪ ಕೊಪ್ಪದ್, ಹಾಸನದ ಸುಬೇಧಾರ್ ನಾಗೇಶ್, ಮೈಸೂರು ಜಿಲ್ಲೆಯ ಹೆಗಡದೇವನಕೋಟೆಯ ಪಿ. ಎನ್. ಮಹೇಶ್ ಇವರುಗಳನ್ನೊಳಗೊಂಡಂತೆ ಇತರೆ ಒಂಭತ್ತು ಯೋಧರ ವೀರ ಮರಣವನ್ನು ಗುಣಗಾನಮಾಡಿ, ಉಪಾಧ್ಯಕ್ಷ ಕಾಗೋಡು ತಿಮ್ಮಪ್ಪ ಮಾತನಾಡಿದರು.

ಸಂತಾಪಸೂಚಕ ಗೊತ್ತುವಳಿಯನ್ನು ಬೆಂಬಲಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್, ಶಾಸಕರುಗಳಾದ ಕೆ.ಆರ್. ರಮೇಶ್‌ಕುಮಾರ್, ವೈ.ಎಸ್.ವಿ. ದತ್ತ, ಜೀವರಾಜ್, ಸಿ.ಟಿ. ರವಿ, ಲೋಬೋ, ಬಿ.ಬಿ.ನಿಂಗಯ್ಯ, ಚಲುವರಾಯಸ್ವಾಮಿ ಮುಂತಾದವರು ಮೃತ ಗಣ್ಯರಿಗೆ ಶ್ರದ್ಧಾಂಜಲಿ ಅರ್ಪಿಸಿ ಮಾತನಾಡುತ್ತಿದ್ದರು.

ಸಂತಾಪ ಸೂಚಕ ಗೊತ್ತುವಳಿಯನ್ನು ಅಂಗೀಕರಿಸಿದ ವಿಧಾನಸಭೆಯು ನಂತರ ಎದ್ದು ನಿಂತು ಎರಡು ನಿಮಿಷ ಮೌನ ಆಚರಿಸುವ ಮೂಲಕ ತನ್ನ ಗೌರವವನ್ನು ಸಮರ್ಪಿಸಿತು.

ಬಾಬು:ಜೆಪಿಆರ್

## ಕನ್ನಡ ಚಲನಚಿತ್ರ ಸಿಂಹಾವಲೋಕನ – ಸಾಧಕರಿಗೆ ಸನ್ಮಾನ

ಬೆಂಗಳೂರು, ಮಾರ್ಚ್ 1 (ಕರ್ನಾಟಕ ವಾರ್ತೆ)

ಕರ್ನಾಟಕ ಚಲನಚಿತ್ರ ಅಕಾಡೆಮಿಯು ಮಾರ್ಚ್ 3 ರಂದು ಸಂಜೆ 5–30 ಗಂಟೆಗೆ ಕನ್ನಡ ವಾಕ್ಚಿತ್ರ ಹುಟ್ಟು ಹಬ್ಬದ ಅಂಗವಾಗಿ ಕನ್ನಡ ಚಲನಚಿತ್ರ ಸಿಂಹಾವಲೋಕನ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಬೆಂಗಳೂರು ವಸಂತನಗರದ ಮಿಲ್ಲರ್ಸ್ ರಸ್ತೆಯಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದೆ.

ಮೂಲ ಸೌಲಭ್ಯ ಅಭಿವೃದ್ಧಿ ವಾರ್ತಾ ಮತ್ತು ಸಾರ್ವಜನಿಕ ಸಂಪಕ ಹಾಗೂ ಹಜ್ ಖಾತೆ ಸಚಿವ ಶ್ರೀ ಆರ್. ರೋಷನ್‌ಬೇಗ್ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸುವರು. ವಸತಿ ಸಚಿವ ಡಾ. ಎಂ.ಹೆಚ್. ಅಂಬರೀಶ್ ಅವರು ಸಾಧಕರಿಗೆ ಸನ್ಮಾನವನ್ನು ಮಾಡಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಾದ ಶ್ರೀಮತಿ ಉಮಾಶ್ರೀ ಅವರು ವಹಿಸಲಿದ್ದಾರೆ.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಶ್ರೀ ಎಸ್. ವಿ. ರಾಜೇಂದ್ರಸಿಂಗ್ ಬಾಬು ಅವರು ಪ್ರಾಸ್ತಾವಿಕವಾಗಿ ಮಾತನಾಡುವರು. ಸಾಹಿತಿಗಳು, ಚಲನಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಪುರಸ್ಕೃತರಾದ ಡಾ. ಬರಗೂರು ರಾಮಚಂದ್ರಪ್ಪ ಅವರು ಕನ್ನಡ ಚಿತ್ರರಂಗದ ಬೆಳವಣಿಗೆ ಒಂದು ವಿಶ್ಲೇಷಣಾತ್ಮಕ ನೋಟ ಕುರಿತಂತೆ ಮಾತನಾಡುವರು.

**ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯ ಶ್ರೀ ಪಿ.ಸಿ. ಮೋಹನ್, ಕನ್ನಡ ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಕಾರ್ಯದರ್ಶಿ ಡಾ. ಎನ್.ಎಸ್. ಚನ್ನಪ್ಪಗೌಡ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಶ್ರೀ ಎನ್. ಆರ್. ವಿಶುಕುಮಾರ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಶ್ರೀ ಸಾ.ರಾ. ಗೋವಿಂದು ಪಾಲ್ಗೊಳ್ಳಲಿದ್ದಾರೆ.**

**ಕನ್ನಡ ಚಲನಚಿತ್ರರಂಗದ ಖ್ಯಾತ ನಟರಾದ ಶ್ರೀ ಪುನೀತ್ ರಾಜ್‌ಕುಮಾರ್ ಹಾಗೂ ಶ್ರೀ ದರ್ಶನ್ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.**

**ಅಂದು ಸಂಜೆ 5.00 ಗಂಟೆಗೆ ಕನ್ನಡ ಚಲನಚಿತ್ರ ಗೀತೆಗಳ ಗಾಯನವನ್ನು ಏರ್ಪಡಿಸಲಾಗಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.**

**ಬಾಬು:ಜಿಪಿಆರ್.**

## <u>ಮಾರ್ಚ್ 4 ರಿಂದ ೮ರ ವರೆಗೆ</u>

## <u>ಅರಸು ಶತಮಾನೋತ್ಸವ ದಿನಾಚರಣೆ ಅಂಗವಾಗಿ ಅರಸು ರಂಗೋತ್ಸವ</u>

ಭೂ ಸುಧಾರಣೆಯನ್ನು ಅನುಷ್ಠಾನ ಮಾಡುವ ಮೂಲಕ ಉಳುವವನಿಗೆ ಭೂಮಿ ಸಿಕ್ಕುವಂತೆ ಮಾಡಿದ್ದು, ಅನಿಷ್ಟ ಪದ್ಧತಿಗಳಾದ ಮಲ ಹೊರುವ, ಜೀತ ಪದ್ಧತಿಯನ್ನು ರದ್ದುಪಡಿಸಿ, ನೀರಾವರಿಗೆ ಆದ್ಯತೆ ಕೊಟ್ಟು, ಯುವಕರಿಗೆ ಬೆಂಬಲದ ಸಹಾಯ ಧನ ನೀಡಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿಸಲು ಶ್ರಮಿಸಿದ ಧೀಮಂತ ನಾಯಕ ದಿವಂಗತ ದೇವರಾಜ ಅರಸು ಅವರ ಶತಮಾನೋತ್ಸವದಂಗವಾಗಿ ಅರಸು ರಂಗೋತ್ಸವವನ್ನು ಆಚರಿಸಲು ಕರ್ನಾಟಕ ಸರ್ಕಾರವು ನಿರ್ಧರಿಸಿದೆ ಎಂದು ಡಿ. ದೇವರಾಜ ಅರಸು ಶತಮಾನೋತ್ಸವ ಕಾರ್ಯಕಾರಿ ಸಮಿತಿ ಅಧ್ಯಕ್ಷರಾದ ಶ್ರೀ ಅಡಗೂರು ಹೆಚ್ ವಿಶ್ವನಾಥ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಇಂದು ಕನ್ನಡ ಭವನ ಅಂತರಂಗ ಸಭಾಂಗಣದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ಕನ್ನಡ ನಾಡು ಅರಸು ಅವರ ಹಿಂದೆ ಮತ್ತು ಅರಸು ಅವರ ನಂತರ ಎಂಬ ಮಾಪನವಾಗಿ ದಂತಕತೆಯಾದವರು ದೇವರಾಜ ಅರಸು. ಇಂತಹ ನಾಯಕನ ಜೀವನ ಕತೆ ಕನ್ನಡ ನಾಡಿನ ಕತೆ ಆಗಿರುವುದನ್ನು ಅನಾವರಣ ಮಾಡುವ ಕೆಲಸವನ್ನು ಅರಸು ಅವರ ಶತಮಾನೋತ್ಸವದ ಹೆಸರಿನಲ್ಲಿ ಯುವಜನರಿಗೆ ತಲುಪಿಸಲು ಮಾರ್ಚ್ 4 ರಿಂದ ೮ರ ವರೆಗೆ ಅರಸು ರಂಗೋತ್ಸವವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗಲದಲಿ ಆಯೋಜಿಸಲಾಗಿದೆ ಎಂದರು.

ಶತಮಾನೋತ್ಸವ ಕಾರ್ಯಕಾರಿ ಸಮಿತಿಯ ಖ್ಯಾತ ನಾಟಕ ನಿರ್ದೇಶಕರು ಹಾಗೂ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರೂ ಆಗಿರುವ ಶ್ರೀ ಸಿ. ಬಸಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ಉಪ ಸಮಿತಿಯನ್ನು ರಚಿಸಲಾಗಿದೆ. ದೇವರಾಜ ಅರಸು ಅವರ ಜೀವನ, ರಾಜಕಾರಣದ ಪ್ರವೇಶ, ಜನರೊಡನೆ ಅರಸು ಅವರು ನಡೆದುಕೊಂಡ ರೀತಿ, ಕರ್ನಾಟಕದ ಜನತೆ ಅರಸು ಅವರನ್ನು ಪ್ರೀತಿಸಿದ, ಗೌರವಿಸಿದ ವಿಧಾನಗಳು ಇಂದಿನ ನಮ್ಮ ರಾಜಕಾರಣಕ್ಕೆ ಮಾರ್ಗದರ್ಶನ ಮಾಡುವಷ್ಟು ಸತ್ವಪೂರ್ಣವೂ, ಅನುಕರಣೀಯವೂ ಆಗಿದ್ದು, ಅವರ ಕುರಿತ ನೃತ್ಯ ರೂಪಕ ನಾಟಕಗಳನ್ನು ಸಜ್ಜುಗೊಳಿಸಲಾಗಿದೆ ಎಂದರು. ಈ ಸಮಿತಿಯಲ್ಲಿ ನಾಡಿನ ಸಾಹಿತಿಗಳು, ರಂಗನಿರ್ದೇಶಕರು, ಸಂಗೀತ, ನೃತ್ಯ ತಜ್ಞರು ಸದಸ್ಯರಾಗಿ ನೇಮಿಸಲ್ಪಟ್ಟಿದ್ದಾರೆ.

ಅರಸು ನಮನ, ಅರಸು-ಕನಸು, ನಾಡ ಒಡನಾಡಿ, ಮುಖ್ಯಮಂತ್ರಿ ಅರಸು ಹಾಗೂ ಶ್ರೀಸಾಮಾನ್ಯರ ಅರಸು ಎಂದು ಐದು ನಾಟಕಗಳನ್ನು ನಾಡಿನ ಶ್ರೇಷ್ಠ ರಂಗ ನಿರ್ದೇಶಕರು ಆಯ್ಕೆ ಮಾಡಿ ಸಾದರಪಡಿಸುತ್ತಿದ್ದಾರೆ. 10 ಗೀತೆಗಳ ಮೂಲಕ ಅರಸು ಅವರ ಜೀವನ ಕತೆಯನ್ನು, ರಾಜಕಾರಣವನ್ನು ಅರಸು ಯೋಜನೆಗಳ ವಿವರ ಹಾಗೂ ಪರಿಣಾಮಗಳನ್ನು ನೃತ್ಯದ ಮೂಲಕ ಪ್ರಸ್ತುತಪಡಿಸಲಾಗುತ್ತದೆ ಎಂದರು. 100 ಜನ ಯುವ ರಂಗಕರ್ಮಿಗಳನ್ನೊಳಗೊಂಡ ಐದು ತಂಡಗಳು ಕರ್ನಾಟಕದ ಜಿಲ್ಲಾ ಹಾಗೂ ತಾಲೂಕುಗಳಲ್ಲಿ ಸಂಚರಿಸಿ ಅರಸು ಅವರ ಬಗ್ಗೆ ನಾಟಕ ಪ್ರದರ್ಶನ ನೀಡಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಎ. ದಯಾನಂದ, ಶತಮಾನೋತ್ಸವ ಕಾರ್ಯಕಾರಿ ಸಮಿತಿಯ ಖ್ಯಾತ ನಾಟಕ ನಿರ್ದೇಶಕರು ಹಾಗೂ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರೂ ಆಗಿರುವ ಶ್ರೀ ಸಿ. ಬಸಲಿಂಗಯ್ಯ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಂ. ನಾಗರಾಜ ಉಪಸ್ಥಿತರಿದ್ದರು.

**ಪಿಕೆ/ಪಿಕೆ**